**ದಿಃ 11-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿಯರ ಪರ**

ವಾದಿಯರು ಹಾಗೂ ಅವರ ಪರ ವಕೀಲರು ಹಾಜರ ಇರುವುದಿಲ್ಲ. ಆದ್ದರಿಂದ ವಾದಿಯರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ 2(ಎ) ರಿಂದ (ಸಿ) ಪರ ಪಿ ಎಸ್ ಎನ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾವು 1 ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಿಸಿದವರು ಎಂದು ನಮ್ಮ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ನಮ್ಮ ಕುಟುಂಬದ ವಂಶಾವಳಿಯನ್ನು ತೋರಿಸಿಲ್ಲ. ನಾವು ದೇಸಾಯಿ ಕುಟುಂಬ ಹಾಗೂ ಅದಕ್ಕೆ ಸಂಬಂಧಿಸಿದ ಆಸ್ತಿಗಳ ಬಗ್ಗೆ ಪಾಲು ಕೋರಿ ದಾವೆ ಸಲ್ಲಿಸಿಲ್ಲ. ವಾದಿ ಎಷ್ಟು ಆಸ್ತಿಗಳ ಬಗ್ಗೆ ದಾವೆ ಸಲ್ಲಿಸಿದ್ದಾರೆ ಎಂಬುದನ್ನು ನಾನು ವಾದಿಯರಿಂದ ಕೇಳಿ ತಿಳಿದುಕೊಂಡಿದ್ದೇನೆ. ವಾದಿಯರು ಮಾಚಾಪುರ ಗ್ರಾಮದ 6 ಎಕರೆ ಜಮೀನಿನ ಬಗ್ಗೆ ಮಾತ್ರ ದಾವೆ ಸಲ್ಲಿಸಿದ್ದಾರೆ. ದೇಸಾಯಿ ಕುಟುಂಬಕ್ಕೆ ಸೇರಿದ 480 ಎಕರೆ ಪೂರ್ತಿ ಜಮೀನನ್ನು ದಾವೆಯಲ್ಲಿ ಏಕೆ ಸೇರಿಸಿಲ್ಲ ಎಂದು ಕೇಳಿದ್ದೇನೆ ಆದರೆ ನನಗೆ ಹೇಳಲು ಬರುವುದಿಲ್ಲ. ನಮ್ಮ ತಂದೆ 480 ಎಕರೆ ಜಮೀನಿನ ಬಗ್ಗೆ ಧಾರವಾಡ ನ್ಯಾಯಾಲಯಕ್ಕೆ ಹೋಗಿದ್ದರು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರ ಪಡಿಸಿಲ್ಲ. ಅಣ್ಣ ತಮ್ಮಂದಿರ ಮಧ್ಯ ಅದರಲ್ಲಿ ಹಿಸ್ಸೆ ಆಗಿರುತ್ತದೆ. ಹಿಂದಿನ ದಾವೆಯಲ್ಲಿ ದಾವಾ ಆಸ್ತಿಯನ್ನು ಸಹ ಸೇರಿಸಿದ್ದರು. ಪಾಲಿನಲ್ಲಿ ದಾವಾ ಆಸ್ತಿ ಕೃಷ್ಣರಾವ್ ನಾರಾಯಣರಾವ್ ದೇಸಾಯಿ ಇವರ ಪಾಲಿಗೆ ಹೋಗಿರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಧಾರವಾಡ ನ್ಯಾಯಾಲಯದಲ್ಲಿ ಯಾವುದೆ ಪ್ರಕರಣ ದಾಖಲಾಗಿಲ್ಲ ಅಂದರೆ ಸರಿಯಲ್ಲ. ನಾನು ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ದಾವಾ ಆಸ್ತಿಯ ದಾಖಲೆಗಳನ್ನು ನೋಡಿಲ್ಲ. 1974 ರಿಂದ ಇಲ್ಲಿಯವರೆಗೆ ದಾವಾ ಆಸ್ತಿ ಬಗ್ಗೆ 1 ನೇ ಪ್ರತಿವಾದಿಯನ್ನು ನಾನು ವಿಚಾರಿಸಿಲ್ಲ. ದಾವಾ ಆಸ್ತಿ ಮೂಲತಃ ರುಕ್ಮಿಣಿಬಾಯಿ ಇವರಿಗೆ ಸಂಬಂದಪಟ್ಟ ಆಸ್ತಿ ಅಂದರೆ ಸರಿಯಲ್ಲ. ರುಕ್ಮಿಣಿಬಾಯಿಯವರು 1943 ಕ್ಕಿಂತ ಮುಂಚೆ ಮದ್ವಾಚಾರ್ಯ ಗುಡಿ ಇವರಿಗೆ ದಾನ ಪತ್ರದ ಮೂಲಕ ದಾವಾ ಆಸ್ತಿಯನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. 1943 ರಿಂದ ಮದ್ವಾಚಾರ್ಯರು ಮರಣ ಹೊಂದುವವರೆಗೆ ದಾವಾ ಆಸ್ತಿ ಅವರ ಹೆಸರಿನಲ್ಲಿ ದಾಖಲಿತ್ತು ಎಂದರೆ ಸಾಕ್ಷಿ ದೀಪ ಹಚ್ಚಿಕೊಂಡು ಪೂಜೆ ಮಾಡಿ ಊಟ ಮಾಡುವಂತೆ ಕೊಟ್ಟಿದ್ದರು ಭಕ್ಷಿಸ ಕೊಟ್ಟಿಲ್ಲ ಅನ್ನುತ್ತಾರೆ. ಭಕ್ಷಿಸ ಮೂಲಕ ದಾವಾ ಆಸ್ತಿಯನ್ನು ಕೊಟ್ಟಿರುವುದು 1 ನೇ ಪ್ರತಿವಾದಿ ಹಾಗೂ ಅವರ ಪೂರ್ವಜರಿಗೆ ಗೊತ್ತಿತ್ತು ಅಂದರೆ ನಿಜ. ಭಕ್ಷಿಸ ಪತ್ರವನ್ನು ಇಲ್ಲಿಯವರೆಗೆ ಯಾರು ಪ್ರಶ್ನಿಸಿಲ್ಲ. ದಿನಾಂಕ 02.01.1943 ರಂದು ಮದ್ವಾಚಾರ್ಯ ಗುಡಿಯವರು ದಾವಾ ಆಸ್ತಿಯನ್ನು ಎಚ್ ಆರ್ ಗುಡಿ ಇವರಿಗೆ ಮಾಡಿದ್ದಾರೆ ಅಂದರೆ ಸರಿಯಲ್ಲ. ಹಕ್ಕುಬಿಟ್ಟ

ಪತ್ರದ ಮೂಲಕ ಹನಮಂತಆಚಾರ್ಯ ಗುಡಿ ರವರ ಹೆಸರಿಗೆ 1943 ರಿಂದ ಅವರು ಮರಣ ಹೊಂದುವವರೆಗೆ ಸದರಿ ಆಸ್ತಿ ಅವರ ಹೆಸರಿನಲ್ಲಿ ದಾಖಲಿತ್ತು ಅಂದರೆ ನಿಜ. ಸದರಿ ಹಕ್ಕುಬಿಟ್ಟ ಪತ್ರವನ್ನು ಹಾಗೂ ಮ್ಯುಟೇಷನಗಳನ್ನು 1ನೇ ಪ್ರತಿವಾದಿ ಪೂರ್ವಜರು ಪ್ರಶ್ನಿಸಿಲ್ಲ ಅಂದರೆ ನಿಜ.

ನಾನು ಈಗ ಸುಮಾರು 50 ವರ್ಷಗಳಿಂದ ಧಾರವಾಡದಲ್ಲಿ ವಾಸವಾಗಿದ್ದೇನೆ. 1952 ಕ್ಕಿಂತ ಪೂರ್ವದಲ್ಲಿ ಮದ್ವಾಚಾರ್ಯ ಗುಡಿ ಹಾಗೂ 1ನೆ ಪ್ರತಿವಾದಿಯ ಪೂರ್ವಜರ ಮಧ್ಯ ದಾವೆ ನಡೆದಿತ್ತು ಎನ್ನುವದು ನನಗೆ ಗೊತ್ತಿಲ್ಲ. ದಾವೆಯಲ್ಲಿ ದಾವಾ ಆಸ್ತಿಯು ಮದ್ವಾಚಾರ್ಯ ಗುಡಿ ರವರಿಗೆ ಸೇರಿದ್ದು ಎಂದು ಆಗಿರುತ್ತದೆ ಅಂದರೆ ನಿಜ. 1ನೇ ಪ್ರತಿವಾದಿಯು ಇದೆ ನ್ಯಾಯಾಲಯದಲ್ಲಿ 4-5 ವರ್ಷಗಳ ಹಿಂದೆ ಬೇರೆ ದಾವೆ ಸಲ್ಲಿಸಿದ್ದರು ಎನ್ನುವದು ನನಗೆ ಗೊತ್ತಿದೆ. ಸದರಿ ದಾವೆ ವಜಾಗೊಂಡಿದೆ. ನಾವು ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಕೋರಿ ಇಲ್ಲಿಯವರೆಗೆ ಯಾವುದೆ ದಾವೆ ಸಲ್ಲಿಸಿಲ್ಲ ಆದರೆ ನಮ್ಮ ತಂದೆ ಸಲ್ಲಿಸಿದ್ದರು. ವಾದಿಯರು ಹಾಗೂ 1ನೇ ಪ್ರತಿವಾದಿ ವಿನಂತಿ ಮೇರೆಗೆ ದಾವೆಯಲ್ಲಿ ಪಕ್ಷಗಾರರಾಗಿ ಹಾಜರಾಗಿದ್ದೇವೆ ಅಂದರೆ ಸರಿಯಲ್ಲ. ನಾವು ದೇಸಾಯಿ ಕುಟುಂಬಕ್ಕೆ ಸಂಬಂಧಿಸಿದವರಲ್ಲ ಆದ್ದರಿಂದ ವಂಶಾವಳಿ ತೋರಿಸಿಲ್ಲ ಅಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ದಾವೆಯಲ್ಲಿ ನಾವು ಯಾವುದೆ ಪಾಲು ಕೇಳಿಲ್ಲ ಅಂದರೆ ಸರಿಯಲ್ಲ. ರುಕ್ಮಿಣಿಬಾಯಿಯವರು ಭಕ್ಷಿಸ ಮಾಡಿಕೊಟ್ಟ ನಂತರ ದೇಸಾಯಿ ಕುಟುಂಬದ ಆಸ್ತಿ ಹಕ್ಕು ನಷ್ಟ ಆಗಿದೆ ಅಂದರೆ ನಿಜ. ದಾವಾ ಆಸ್ತಿ ದೇಸಾಯಿ ಘರಾಣೆಯ ಆಸ್ತಿ ಅಲ್ಲ ಅಂದರೆ ಸರಿಯಲ್ಲ. 1943 ರಿಂದ ಮದ್ವಾಚಾರ್ಯ ದೇಸಾಯಿಯವರು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಾ ಬಂದಿರತ್ತಾರೆ ಅಂದರೆ ನಿಜ. ಅವರ ಮರಣಾನಂತರ ಅವರ ಮಗ ಎಚ್ ಆರ್ ಗುಡಿ ಇವರು ಸಾಗುವಳಿ ಮಾಡುತ್ತಾ ಬಂದಿದ್ದು ಅವರು ಮರಣಾ ನಂತರ 2ನೇ ಪ್ರತಿವಾದಿ ವಾರಸುದಾರರು ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ನಿಜ. ದಾವಾ ಆಸ್ತಿಯಲ್ಲಿ ನನಗೆ ಯಾವುದೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ವಾದಿಯರು ಹಾಗೂ 1ನೇ ಪ್ರತಿವಾದಿಯೊಂದಿಗೆ ಮಿಲಾಪಿಯಾಗಿ 2ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಹಾಗೂ 1ನೇ ಪ್ರತಿವಾದಿಗೆ ಯಾವುದೆ ಹಕ್ಕು ಇಲ್ಲದಿದ್ದರೂ ಕೂಡಾ ಸುಳ್ಳು ಹಕ್ಕು ಸಾದಿಸುತ್ತಿದ್ದಾರೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**